ಕುಡಿಯನ್ನೇ ಹತ್ಯೆ ಮಾಡುವ ಹೊತ್ತಲ್ಲಿ ಮಗಳು ಹೇಳುತ್ತಾಳೆ...

**'ಅಪ್ಪಯ್ಯ, ನಿನ್ನ ಒರಟು ಬೆರಳುಗಳಿಂದೆನ್ನ,**
**ಕೊರಳ ಕಟುವಾಗಿ ಮೀಟುತ್ತಿರೆ ಈಟುತ್ತಿರೆ,**
**ನನ್ನ ಕಣ್ಣುಗಳು ಬೆಳಗಾಗುತ್ತಿದ್ದವು,**
**ನಿನ್ನ ಕಣ್ಣುಗಳು ನೀರಿಲ್ಲದೆ ಮಿಡುಕಾಡುತ್ತಿದ್ದವು'.**

ಹೆಚ್ಚು ವಿವರಣೆಯ ಅಗತ್ಯವಿಲ್ಲದೆ ಈ ಸಾಲುಗಳು ಓದುಗರ ಎದೆಗಿಳಿಯುತ್ತವೆ. 'ನಿನ್ನ ಜಾತಿ ಯಾವುದಪ್ಪಯ್ಯಾ' ಎನ್ನುವ ಮಗಳು ಕೊನೆಗೆ 'ನಿನ್ನ ಸಿಟ್ಟು ಕೇಡುಗಳು ಬರಡಾದಾಗ... ನಿನ್ನ ಮರ್ವಾದೆಗೇಡಾದಾಗ, ಬಂದುಬಿಡು ನನ್ನೊಡಲಾಳಕ್ಕೆ, ನನ್ನದೇ ಕೂಸು ನೀನು' ಎನ್ನುತ್ತಾಳೆ. ತಣ್ಣಗಿನ ಕ್ರೌರ್ಯ ಮತ್ತು ಪ್ರೀತಿಯ ಬಿಸುಪನ್ನು ಅವರು ಎದುರು ಬದುರಾಗಿಸುತ್ತಾರೆ.

ಇಲ್ಲಿನ ಬಹುತೇಕ ಕವಿತೆಗಳು ಎದುರಿಗಿರುವವರ ಜೊತೆ ಮಾತಾಡುವ ಬಗೆಯಲ್ಲಿ, ಸಂವಾದಕ್ಕೆಳಸುವ ಬಗೆಯಲ್ಲಿ ಮೂಡಿ ಬಂದಿವೆ. ಅನೇಕ ವರ್ಷಗಳಿಂದ ಆಳುವವರು, ಉಳ್ಳವರು, ತಮ್ಮಂತೆಯೇ ಇರುವ ಮನುಷ್ಯರನ್ನು ತಮ್ಮ ಅನುಕೂಲಗಳಿಗಾಗಿದಾಳಗಳಾಗಿ ಬಳಸಿಕೊಳ್ಳುತ್ತಲೇ ಬಂದಿದ್ದಾರೆ ಎನ್ನುವ ಅರಿವು ಎಲ್ಲ ಕವಿತೆಗಳಲ್ಲಿ ಹರಡಿದಂತೆ ಗೋಚರಿಸುತ್ತದೆ. 'ನಿಮಗೆ ತುತ್ತೀಯದೇ' ಎಂಬ ಕವಿತೆಯಲ್ಲಿ ಕವಿ,

**'ನಾಲಗೆ ಬಲಕ್ಕೆ ಹೊರಳಿದರೆ,**
**ಯುದ್ಧ ಎನ್ನುವಿರಿ,**
**ಎಡಕ್ಕೆ ಹೊರಳಿದರೆ,**
**ಶುದ್ಧ ಎನ್ನುವಿರಿ,**
**ಒಮ್ಮೆ ರಕ್ತ ಎನ್ನುವಿರಿ,**
**ಇನ್ನೊಮ್ಮೆ ಪರಿತ್ಯಕ್ತ ಎನ್ನುವಿರಿ,**
**ಮೂರಗಲ ಜಾಗ ಕೊಡಿರೆಂದು ಬರುವಿರಿ,**
**ಜಗದಗಲ ಪಾದವೂರಿ ಬಲಿಗೈಯುವಿರಿ'**

ಎಂದು ಎದುರಿಗಿರುವವರ ನಡೆಗಳ ವಿಸಂಗತಿಯನ್ನು ತೋರುತ್ತಾ ಮುಂದುವರಿದು,

**'ನಮ್ಮ ಬೆವರ ಬುತ್ತಿಗೆ ಕೈಯೊಡ್ಡುವವರು ನೀವು,**
**ನಿಮಗೆ ತುತ್ತೀಯದೆ ಉಣುವುದಿಲ್ಲ ನಾವು'**

ಎಂಬ ಔದಾರ್ಯದ ನುಡಿಯೊಂದಿಗೇ ಕೊನೆಗೊಳ್ಳುತ್ತದೆ. ಹೀಗೆಲ್ಲ ನಡೆಸಿಕೊಂಡವರ ಬದುಕಿಗೆ ನಮ್ಮ ಬೆವರೇ ಆಧಾರ ಎಂಬುದನ್ನು ನೆನಪಿಸುತ್ತಾ, ಇದು ಅವರ ಅಮಾನವೀಯತೆಯನ್ನು ಬಯಲಿಗೆಳೆಯುತ್ತದೆ. ಅವರಲ್ಲಿ ಕಿಂಚಿತ್ತಾದರೂ ಮಾನವೀಯತೆಯ ಮಿಡಿತ ಇದ್ದಲ್ಲಿ ಅವರು ಸ್ವನಿರೀಕ್ಷಣೆಗೆ ಒಡ್ಡಿಕೊಳ್ಳಬೇಕು. ಹಾಗೆಯೇ ಇನ್ನೊಂದು ಕವಿತೆಯಲ್ಲಿ, **'ನೀವು ಕಳೆಯಂತೆ ಬೆಳೆಯುತ್ತಲೇ ಇರಿ, ನಾವು ತೆನೆಯಂತೆ ತೂಗುತ್ತಲೇ ಇರುತ್ತೇವೆ'** ಎಂಬ ಸಾಲು ಬರುತ್ತದೆ. ಇವು ನೋವುಂಡೂ ಪ್ರೀತಿ ತೋರುವ ಸಮುದಾಯಗಳೊಳಗಿನ ಸ್ಥೈರ್ಯವನ್ನೂ ತೋರುತ್ತವೆ. ಈ ನೋವು ಸಮಕಾಲೀನ ತಲ್ಲಣಗಳ ಜೊತೆ ಬೆಸೆದುಕೊಳ್ಳುವ ಬಿಂದುವಾಗಿ ನಮಗೆ ಕಾಣಿಸುತ್ತದೆ. 'ಕೂಡು ಚಿಟ್ಟೆ ತಾನೊಂದು' ಎನ್ನುವ ಕವಿತೆ ಸಮಕಾಲೀನ ಹೋರಾಟಗಳ ಹಿನ್ನೆಲೆಯಲ್ಲಿ ಮೂಡಿಸಲಾದ ಬಿರುಕುಗಳಿಗೆ ಉತ್ತರವಾಗಿ ಹೊಮ್ಮಿದೆ. ರಾಜಕೀಯ ನಡೆಸುವವರು 'ಮೀಸಲೊಳಿತಾಗುವ ಸಮಯಕ್ಕೆ' ಚಿಟ್ಟೆಗಳ ರೆಕ್ಕೆಗಳಿಗೆ ಹೆಸರಿಟ್ಟು ಪೇಜು ಪೇಜು ಬರೆದು ಬಿರುಕು ಮೂಡಿಸಲು ಹೊರಟಾಗ

**'ನನ್ನೊಡಲ ಚಿಟ್ಟೆಗೆ,**
**ರೆಕ್ಕೆಗಳೆರಡು ದಿಕ್ಕೊಂದು,**
**ಒಂದಕ್ಕೊಂದು ರೆಕ್ಕೆ ಕೂಡಿದಾಗ,**
**ಚಿಟ್ಟೆ ತಾನೊಂದು'** ಎಂದು ಕವಿ ಬರೆಯುತ್ತಾ

ತಕ್ಕ ಉತ್ತರ ನೀಡುತ್ತಾರೆ. ಹಾಗೆಯೇ 'ಗಾಜಾ' ಕುರಿತಾದ ಕವಿತೆಯಲ್ಲಿ 'ನೊಂದ ಕೈಗಳೇ ನೋಯಿಸುತ್ತಿವೆಯಲ್ಲಾ' ಎಂದ ಮಾತು ಇತಿಹಾಸ ಮರೆತವರಿಗೆ ಸಾಗಿಬಂದ ದಾರಿಯನ್ನು ಮತ್ತೆ ನೆನಪಿಸಿ ಕೊಡುತ್ತದೆ.

ದಾರಿ, ರಸ್ತೆ, ಕತ್ತಲು, ಬೆಳಕು, ಮರ, ಚಿಟ್ಟೆ, ಮಿಡತೆ ಹೀಗೆ ಸಾಲುಸಾಲು ರೂಪಕಗಳ ಮೂಲಕ ಕವಿತೆಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಒಂದೆಡೆ 'ಹಸಿಗನಸುಗಳಿಗೆ ನುಸಿಬಾಧೆಯ ಕಾಟ' ಎನ್ನುವ ಕವಿ 'ಮೈಗನಸು' ಎಂಬ ಕವಿತೆಯಲ್ಲಿ ದಾರಿ, ಗುರಿ, ನೋಟ, ಕುಲ ಎಲ್ಲವೂ ಪಲ್ಲಟಗೊಂಡಷ್ಟೂ ಹೊಸಲೋಕ ಸೃಷ್ಟಿಯಾಗುತ್ತದೆ ಎಂಬುದನ್ನು ಕವಿ ತೋರುತ್ತಾರೆ.



**'ಎದುರಿದ್ದ ದಾರಿ**
**ಹಿಂದುಮುಂದಾಯಿತು,**